ಆ) ಹೌದು. ಈ ಬಗ್ಗೆ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ:9-1-2002ರಂದು ಹೊರಡಿಸಲಾಗಿದೆ. ಸದರಿ ಪ್ರಸ್ತಾವನೆಗೆ ಇರಬಹುದಾದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಅವಧಿಯ ಒಳಗಾಗಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರದಿಂದ ಏನು ಅಧಿಸೂಚನೆಯನ್ನು ಹೊರಡಿಸಿದ್ದೀರಿ, ಆ ರೀತಿಯಾಗಿ ಫೆಬ್ರವರಿ 9ನೇ ತಾರೀಖಿನ ನಂತರ ತರೀಕೆರೆ ಪಟ್ಟಣ ಪಂಚಾಯ್ತಿಯನ್ನು ಪುರಸಭೆಯಾಗಿ ಪರಿವರ್ತನೆ ಮಾಡಲು ತಾವು ಕಾರ್ಯಕ್ರಮವನ್ನು ರೂಪಿಸುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತರೀಕೆರೆ ಪಟ್ಟಣ ಪಂಚಾಯತ್ ಅನ್ನು ಪುರಸಭೆಯನ್ನಾಗಿ ಪರಿವರ್ತನೆ ಮಾಡಬೇಕೆಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರದ ವತಿಯಿಂದ ಕ್ರಮ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಈಗಾಗಲೇ ನೋಟಿಫಿಕೇಷನ್ ಸಹ ಹೊರಡಿಸಿದ್ದೇವೆ. ಇದನ್ನು ಮುಂದಿನ ತಿಂಗಳು 9ನೇ ತಾರೀಖಿಗೆ ಮಾಡಬೇಕೆಂದು ಕಾಲಾವಕಾಶವನ್ನು ಇಟ್ಟುಕೊಂಡಿದ್ದೇವೆ. ನಾವು ಇದನ್ನು ತಕ್ಷಣ ಮಾಡಿಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ: ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಹಾಗೆ ರಾಜ್ಯದಲ್ಲಿ ಇನ್ನೂ ಹಲವಾರು ಪಟ್ಟಣ ಪಂಚಾಯತ್‌ಗಳನ್ನು ಪರಿವರ್ತಿಸುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಸ್ತಾವನೆಯನ್ನು ಈಗಾಗಲೇ ನಾವು ಸರ್ಕಾರಕ್ಕೆ ಕಳುಹಿಸಿದ್ದೇವೆ. ಇನ್ನರ ಬಗ್ಗೆಯೂ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆ ರೀತಿಯಾಗಿ ಕನ್‌ವರ್ಟ್ ಮಾಡುವಾಗ ಎಲ್ಲಾ ಪಟ್ಟಣ ಪಂಚಾಯಿತ್ತಿಗಳನ್ನು ಸೇರಿಸಿ ಮಾಡಿ. ಲೀಗಲ್ ಆಗಿ ಇದ್ದರೆ ಮಾಡಿ.

ಚಾಮರಾಜನಗರಕ್ಕೆ ಕಾವೇರಿ ಕುಡಿಯುವ ನೀರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2(13)

ಸದಸ್ಯರು ಹೆಸರು: ಶ್ರೀ ಎ.ಆರ್.ಕೃಷ್ಣಮೂರ್ತಿ(ಸಂತೇಮರಹಳ್ಳಿ)

ಉತ್ತರಿಸುವವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು)

ಪ್ರಶ್ನೆ

1. ಚಾಮರಾಜನಗರಕ್ಕೆ ಕಾವೇರಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಸಮರ್ಪಕವಾಗಿ ಎಲ್ಲಾ ಬಡಾವಣೆಗಳಿಗೂ ನೀರಿನ ವ್ಯವಸ್ಥೆಯಾಗುತ್ತಿದೆಯೇ, ಇಲ್ಲದಿದ್ದಲ್ಲಿ ಎಷ್ಟು ಭಾಗಕ್ಕೆ ಕುಡಿಯುವ ನೀರಿನ ವ್ಯವಸ್ಥೆಯಾಗಿದೆ. ಉಳಿದ ಭಾಗಕ್ಕೆ ನೀರೊದಗಿಸಲು ಕೈಗೊಂಡಿರುವ ಕ್ರಮವೇನು? ಏವರ ನೀಡುವುದು?

2. ಕಾವೇರಿ ನದಿ ಕುಡಿಯುವ ನೀರಿನ ಶುದ್ಧೀಕರಣ ಕೇಂದ್ರದಿಂದ ಹಿಂದೆ ಇರುವ ಗ್ರಾಮಗಳಿಗೆ ಶುದ್ಧೀಕರಣ ನೀರನ್ನು ಒದಗಿಸಲಾಗುತ್ತಿದ್ದೆಯೆ? ಇಲ್ಲದಿದ್ದಲ್ಲಿ ಶುದ್ಧೀಕರಣ ನೀರನ್ನು ಒದಗಿಸಲು ಕೈಗೊಂಡಿರುವ ಕ್ರಮ ಏನು? ಇದು ಯಾವ ಹಂತದಲ್ಲಿದೆ. ಯಾವಾಗ ಪೂರ್ಣಗೊಳ್ಳುವುದು?

ಉತ್ತರ

1. ಚಾಮರಾಜನಗರ ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ಮಂಜೂರಾದಂತೆ ಚಾಮರಾಜ ನಗರದಲ್ಲಿನ ಹಳೇ ಪ್ರದೇಶಗಳಿಗೆ ವಿತರಣಾ ಕೊಳವೆಗಳನ್ನು ಅಳವಡಿಸಲಾಗಿದ್ದು, ಸುಮಾರು ಶೇಕಡಾ 80ರಷ್ಟು ಭಾಗಕ್ಕೆ ಕಾವೇರಿ ಕುಡಿಯುವ ನೀರು ಸರಬರಾಜು ಆಗುತ್ತಿದೆ. ಇತ್ತೀಚೆಗೆ ನಗರಸಭೆ ವ್ಯಾಪ್ತಿಗೆ ಸೇರಿದ ಹಳ್ಳಿಗಳಿಗೂ ಹಾಗೂ ಹೊಸ ಬಡಾವಣೆಗಳಿಗೆ ವಿತರಣಾ ಕೊಳವೆ ಮಾರ್ಗಗಳನ್ನು ಹೊಸದಾಗಿ ಅಳವಡಿಸಿರುವುದಿಲ್ಲ. ಈ ಪ್ರದೇಶಗಳಿಗೆ ಮತ್ತು ಹಳೆಯ ಪ್ರದೇಶಗಳಿಗೆ ಬಿಟ್ಟು ಹೋಗಿರುವ ಭಾಗಗಳಿಗೆ ವಿತರಣಾ ಕೊಳವೆಗಳನ್ನು ಅಳವಡಿಸಲು ಅಂದಾಜು ಪಟ್ಟಿಯೊಂದನ್ನು ತಯಾರಿಸಲಾಗುತ್ತಿದೆ.

2. ಮಂಗಲ ಗ್ರಾಮದ ಬಳಿ ಇರುವ ಕಾವೇರಿ ಕುಡಿಯುವ ನೀರಿನ ಶುದ್ಧೀಕರಣ ಕೇಂದ್ರದ ಹಿಂದೆ ಇರುವ 20 ಹಳ್ಳಿಗಳಿಗೆ ಶುದ್ಧೀಕರಣಾಗಾರದಿಂದ ನೀರೊದಗಿಸಲು ಶುದ್ಧೀಕರಣಾಗಾರದಿಂದ ಹಿಂದಕ್ಕೆ ಪೈಪ್‌ಲೈನ್ ಅಳವಡಿಸಲು ರೂ.272.00 ಲಕ್ಷಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ಚಾಮರಾಜನಗರಕ್ಕೆ ಕಾವೇರಿ ಕುಡಿಯುವ ನೀರಿನ ಯೋಜನೆಯ ವಿಚಾರದಲ್ಲಿ ಜಿಲ್ಲಾ ಕೇಂದ್ರಸ್ಥಾನದಲ್ಲಿ ಸಮರ್ಪಕವಾಗಿ ನೀರನ್ನು ಒದಗಿಸಲಾಗಿದೆಯೇ ಎಂಬುದಾಗಿ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಶೇಕಡ.80ರಷ್ಟು ಭಾಗ ಒದಗಿಸಿದ್ದೇವೆಂಬ

ಅಂಶವನ್ನು ಉತ್ತರದಲ್ಲಿ ತಿಳಿಸಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವಂಥಾದ್ದು ಏನೆಂದರೆ ಈಗ ಚಾಮರಾಜನಗರ ಜಿಲ್ಲಾಕೇಂದ್ರ ನಗರಸಭೆಯಾಗಿರುವಂತಹ ಸಂದರ್ಭದಲ್ಲಿ ನೀರಿನ ಪೈಪಿನ ಅಳವಡಿಕೆ ಮಾಡುವಾಗ ಪೈಪ್‌ಗಳು ಹಳೆಯದು ಏನಿತ್ತು ಅದಕ್ಕೆ ಜೋಡಣೆ ಮಾಡಿದ್ದಾರೆ, ಈ ರೀತಿ ಮಾಡಿರುವುದರಿಂದ ಪೂರ್ಣ ಪ್ರಮಾಣದಲ್ಲಿ ನೀರನ್ನು ಒದಗಿಸುವುದಕ್ಕೆ ಆಗಿಲ್ಲ. ಇಲ್ಲಿ 1 ಮತ್ತು 2ನೇ ವಾರ್ಡ್‌ಗಳಲ್ಲಿ ನೀರು ಬರುತ್ತಾ ಇಲ್ಲ, ಹೀಗಿರುವಾಗ ಶೇಕಡ 80ರಷ್ಟು ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿದೆ ಎಂದು ಹೇಳಿದ್ದಾರೆ. ಇದು ಹೇಗೆ ಎಂದು ನಾನು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ. ಮತ್ತೆ ನೀರು ಶುದ್ಧೀಕರಣ ಕೇಂದ್ರವಿಲ್ಲದೆ ಇರುವಂತಹ ಗ್ರಾಮಗಳಿಗೆ ನೀರು ಕೊಡುವಂತಹ ವಿಚಾರದಲ್ಲಿ ನಾನು ಹಿಂದೆಯೂ ಕೇಳಿದ್ದೆ, ಈಗಲೂ ಈ ವಿಷಯವನ್ನು ಕೇಳುತ್ತಿದ್ದೇನೆ. ಇದಕ್ಕೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಈ ಪ್ರಶ್ನೆಯನ್ನು ನಾಲ್ಕು ಬಾರಿ ಕೇಳಿದ್ದೇನೆ. ಆಗ ಹಿಂದೆ ಇದ್ದಂತಹ ಮಂತ್ರಿಗಳು 20 ಹಳ್ಳಿಗಳಿಗೆ ಮಂಜೂರಾಗಿರುವ ನೀರು ಸರಬರಾಜು ಯೋಜನೆಯಿಂದ ಕುಡಿಯುವ ನೀರನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳುತ್ತಾರೆ. ಈಗ ಕೊಟ್ಟಿರುವಂತಹ ಉತ್ತರದಲ್ಲಿ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸರಿ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕು.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಚಾಮರಾಜನಗರಕ್ಕೆ ಶೇಕಡ 80ರಷ್ಟು ಭಾಗದ ಬಡಾವಣೆಗಳಿಗೆ ಕಾವೇರಿ ನೀರನ್ನು ಒದಗಿಸಲಾಗಿದೆ. ಇತ್ತೀಚೆಗೆ ಈ ಕಾವೇರಿ ನೀರು ಬರುವಂತಹ ಹಾದಿಯಲ್ಲಿ ಯಾವ ಹಳ್ಳಿಗಳು ಸೇರುತ್ತವೆಯೋ, ಆ ಹಳ್ಳಿಗಳಿಗೂ ನೀರನ್ನು ಕೊಡಬೇಕೆನ್ನುವಂಥಾದ್ದು ನಮ್ಮ ನಿಲುವು ಆಗಿದೆ. ಈಗ ಈ ಚಾಮರಾಜನಗರ ಒಂದೇ ಅಲ್ಲ, ಬೇರೆ ನಗರಗಳಿಗೂ ಕೂಡ ನೀರು ಸರಬರಾಜು ಮಾಡತಕ್ಕಂಥ ಕಾಲದಲ್ಲಿ ಉದ್ದಕ್ಕೂ ಬರುವಂತಹ ಹಳ್ಳಿಗಳಿಗೂ ನೀರನ್ನು ಕೊಡಬೇಕೆಂಬುದು ಈ ಸರ್ಕಾರದ ನಿಲುವಾಗಿದೆ. ಹಿಂದೆ ಏನಾಗುತ್ತಿತ್ತು ಎಂದರೆ ಆ ಹಳ್ಳಿಯವರು, ಆ ಪೈಪನ್ನು ನೋಡಬೇಕಾದಂಥ ಪ್ರಸಂಗ ಇತ್ತು. ಈಗ ಆ ಪೈಪ್‌ನಿಂದ ಅವರೂ ಕೂಡ ನೀರಿಗೆ ಭಾಜನರಾಗಬೇಕೆನ್ನುವ ಒಂದು ನಿಲುವನ್ನು ನಾವು ಅಳವಡಿಸಿಕೊಂಡಿದ್ದೇವೆ. ಈ ಹಳ್ಳಿಗಳಿಗೆ ನೀರನ್ನು ಒದಗಿಸಿಕೊಡುವುದಕ್ಕೆ ಈಗ ವಿಶೇಷವಾದ ಅಂದಾಜನ್ನು ತಯಾರಿಸಲಾಗುತ್ತಿದೆ, ಅದನ್ನು ತಯಾರಿಸಿ, ನಂತರ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಮುಖ್ಯಮಂತ್ರಿಗಳು ಹೇಳುವುದನ್ನು ಒಪ್ಪುತ್ತೇನೆ,

ಆದರೆ ಎಸ್ಟಿಮೇಟ್ ಪ್ಲಾನ್ ಪ್ರಕಾರ ಉದ್ದಕ್ಕೂ ಬರುವ ಹಳ್ಳಿಗಳಿಗೆ ಸಮರ್ಪಕವಾಗಿ ನೀರನ್ನು ಒದಗಿಸುತ್ತೇವೆಂದು ಏನು ಯೋಜನೆ ಅಪ್ರೂವ್ ಆಗಿತ್ತು ಅದರಂತೆ ಇದುವರೆಗೆ ಇಲಾಖೆಯವರು ಕ್ರಮ ತೆಗೆದುಕೊಂಡಿಲ್ಲ. ಮಧ್ಯಂತರದಲ್ಲಿ ಲಿಫ್ಟಿಂಗ್ ಪಾಯಿಂಟ್ ಎಂದು ಶುದ್ಧೀಕರಣ ಕೇಂದ್ರವನ್ನು ಹಾಕಿರುವುದು ಒಂದು ತೊಡಕು. ಇದು ಟೆಕ್ನಿಕಲ್ ಪಾಯಿಂಟ್ ಆಫ್ ವ್ಯೂ. ಈಗ ಮತ್ತೆ ನೀರನ್ನು ಒದಗಿಸಿಕೊಡಲು ನೀವು ಹೇಳಿದಂತೆ ಮಾಡಬೇಕಾದರೆ, ಸುಮಾರು ಎರಡು ಕೋಟಿ ಎಪ್ಪತ್ತೆರಡು ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಯನ್ನು ತೋರಿಸಿದ್ದಾರೆ. ಮತ್ತೆ ಸರ್ಕಾರಕ್ಕೆ ಎಸ್ಕಲೇಷನ್ ಬರುತ್ತಿದೆ, ಲಿಫ್ಟಿಂಗ್ ಪಾಯಿಂಟ್‌ನಲ್ಲಿ ಫಿಲ್ಟರಿಂಗ್ ಸೆಂಟರ್ ಹಾಕಿದ್ದರೆ ಎಲ್ಲಾ ಊರುಗಳಿಗೂ ಫಿಲ್ಟರ್ ವಾಟರ್ ಸಿಗುತ್ತಿತ್ತು ನೀರು ಒದಗಿಸಬಹುದಾಗಿತ್ತು. ಆದರೆ ಮತ್ತೆ ಎರಡು ಕೋಟಿ ಎಪ್ಪತ್ತೆರಡು ಲಕ್ಷ ರೂಪಾಯಿಗಳ ಅಂದಾಜನ್ನು ತಯಾರಿಸಿರುವುದು ಸರ್ಕಾರದ ಅಧಿಕಾರಿಗಳ ಮಿಸ್ ಕಂಡಕ್ಟ್‌ನಿಂದ ಆಗಿರುವುದು, ಇಂತಹ ವಿಚಾರಗಳ ಬಗ್ಗೆ ತಾವು ಬಹಳ ಗಂಭೀರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಶುದ್ಧೀಕರಣ ಘಟಕವನ್ನು ಹಾಲುಗೂಡು ಗ್ರಾಮದ ಹತ್ತಿರ ನಿರ್ಮಿಸಲು ತೀರ್ಮಾನವಾಗಿತ್ತು. ಆದರೆ ಆ ಭೂಮಾಲೀಕರು ನ್ಯಾಯಾಲಯದ ತಡೆಯಾಜ್ಞೆಯನ್ನು ತಂದಿದ್ದರಿಂದ ಸಂತೇಮರಹಳ್ಳಿಯಲ್ಲಿಯೂ ಸಹ ಜಮೀನಿನ ತೊಂದರೆ ಇದ್ದುದ್ದರಿಂದ ಶುದ್ಧೀಕರಣ ಘಟಕವನ್ನು ಮಂಗಲದ ಹತ್ತಿರವಿರುವ ಸರ್ಕಾರಿ ಜಮೀನಿಗೆ ಬದಲಾಯಿಸಲಾಯಿತು, Anyway, ತಾವೇನು ಹೇಳುತ್ತಿದ್ದೀರಿ ಅದನ್ನು ನಾವು ಗಮನದಲ್ಲಿಟ್ಟುಕೊಂಡು ಇದನ್ನು ಜರೂರಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಈಗ ಈ ಪ್ರಾಜೆಕ್ಟ್ ಸಿಕ್ಸ್ ಕ್ರೋರ್ಸ್‌ಗೆ ಅಪ್ರೂವ್ ಆಗಿದ್ದು, ಇಲಾಖೆಯ ಅಂಕಿಅಂಶದ ಪ್ರಕಾರ ಇದು ಪೂರ್ಣವಾಗುವ ಸಂದರ್ಭದಲ್ಲಿ ಇಪ್ಪತ್ತು ಕೋಟಿ ರೂ ಆಗಿದೆ. ಈಗ ಮತ್ತೆ ಮೂರು ಕೋಟಿ ರೂ. ಎಂದರೆ ಸರ್ಕಾರಕ್ಕೆ ಎಷ್ಟು ಹೊರೆಯಾಗುತ್ತದೆ? ಏತಕ್ಕೆ ಈ ರೀತಿಯಾಗಿ ಅಧಿಕಾರಿಗಳು ಎಸ್ಟಿಮೇಟ್ ಪ್ಲಾನ್ ಅನ್ನು ಮಾಡುತ್ತಾರೆಂಬುದು ಬಹಳ ಗಂಭೀರವಾದ ವಿಚಾರ. ಆದುದರಿಂದ ತಮ್ಮಲ್ಲಿ ಮತ್ತೊಮ್ಮೆ ಒತ್ತಾಯಪೂರ್ವಕವಾಗಿ ಈ ವಿಚಾರದಲ್ಲಿ ಇನ್ನು ಮುಂದೆ ಯಾವುದೇ ಯೋಜನೆಗಳಿಗೆ ಈ ರೀತಿಯಾಗಕೂಡದೆಂಬುದು ನನ್ನ ಭಾವನೆ.

ಶ್ರೀ ಸಿ.ಗುರುಸ್ವಾಮಿ: ಸನ್ಮಾನ್ಯ ಸಭಾಧ್ಯಕ್ಷರೆ, ನನಗಂತೂ ಬಹಳ ಸಂತೋಷ, ಮುಖ್ಯಮಂತ್ರಿಗಳು ಮಲೆಮಹದೇಶ್ವರ ಬೆಟ್ಟದಿಂದ ಶುರು ಮಾಡಿ ಕೊಳ್ಳೇಗಾಲ, ಯಳಂದೂರು, ಸಂತೇಮರನಹಳ್ಳಿಯವರೆಗೆ ಈಗ ಬಂದಾಯಿತು, ಇನ್ನೂ ಮೂರ್ನಾಲ್ಕು ಕಿಲೋಮೀಟರ್ ಬಾಕಿ ಇದೆ, ಚಾಮರಾಜನಗರಕ್ಕೆ ಬಂದರೆ ಈ ಸಮಸ್ಯೆಗಳೆಲ್ಲಾ

ನಿವಾರಣೆಯಾಗುತ್ತವೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಬಿನ್ನಹ, ಚಾಮರಾಜನಗರಕ್ಕೆ ತಾವು ಪಾದಾರ್ಪಣೆ ಮಾಡಿದರೆ ನಮ್ಮ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತದೆಂದು ನಮ್ಮ ಮನವಿ ಸ್ವಾಮಿ. ಕಾವೇರಿ ನೀರನ್ನು ನರಸೀಪುರದಿಂದ ಚಾಮರಾಜನಗರಕ್ಕೆ ಕೊಡುವುದಕ್ಕೆ ಇಪ್ಪತೆರಡು ಕೋಟಿ ರೂಪಾಯಿಗಳ ಯೋಜನೆ ಇದ್ದು, ಒಂದು ದುರಂತವೆಂದರೆ, ಕಾವೇರಿ ನೀರು ಚಾಮರಾಜನಗರಕ್ಕೆ ಬಂದಿದೆ, ಆದರೆ ನಲವತ್ತು ವರ್ಷಗಳ ಹಿಂದೆ ಮಾಡಿದಂಥ ಡಿಸ್ಟ್ರಿಬ್ಯೂಟರಿ ಲೈನ್‌ಗೆ ಈ ಕನೆಕ್ಷನ್ ಕೊಟ್ಟಿರುವುದರಿಂದ ಬಹುಶಃ ಸಮರ್ಪಕವಾಗಿ ಈ ನೀರನ್ನು ಕೊಡುವ ಕೆಲಸವಾಗುತ್ತಿಲ್ಲವೆಂದು ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಡಿಸ್ಟ್ರಿಬ್ಯೂಟರಿ ಸಿಸ್ಟಮ್ಸ್ ಇಂಪ್ರೂವ್ ಮಾಡದೆ ನೀವು ಕಾವೇರಿ ನೀರನ್ನು ತಂದರೂ ಕೂಡ ಪ್ರಯೋಜನವಾಗುವುದಿಲ್ಲ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ, ಈಗಾಗಲೇ ತಮ್ಮಲ್ಲಿಗೆ ಎಸ್ಟಿಮೇಟ್ ಬಂದಿದೆ ಇದನ್ನು ಯಾವಾಗ ಜಾರಿಗೆ ಕೊಡುತ್ತೀರಿ? ಈ ವರ್ಷದ ಬಜೆಟ್‌ನಲ್ಲಾದರೂ ಹಣವನ್ನು ಮಂಜೂರು ಮಾಡಿಕೊಟ್ಟರೆ ನೀವು ಮಾಡಿದ ಕೆಲಸ ಸಾರ್ಥಕವಾಗುತ್ತದೆ, ಇದಕ್ಕೆ ಮುಖ್ಯಮಂತ್ರಿಗಳಿಂದ ನಾನು ಉತ್ತರವನ್ನು ಬಯಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ನಾನು ಈಗಾಗಲೇ ಚಾಮರಾಜನಗರ ತಾಲ್ಲೂಕಿಗೆ ಹೋಗಿದ್ದೇನೆ, ಆದರೆ ಮಾನ್ಯ ಸದಸ್ಯರು ಮತ್ತೆ ನನ್ನನ್ನು ಬಹಳ ವಿಶ್ವಾಸದಿಂದ ಆಹ್ವಾನ ಮಾಡುತ್ತಿದ್ದಾರೆ, ಒಂದಲ್ಲ ಒಂದು ದಿವಸ ಚಾಮರಾಜನಗರಕ್ಕೆ ಹೋಗುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಸದಸ್ಯರ ಇಚ್ಛೆ ಏನೆಂದರೆ, ಮುಖ್ಯಮಂತ್ರಿಗಳಾಗಿದ್ದಾಗ ಬರಬೇಕೆನ್ನುವುದಾಗಿದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಚಾಮರಾಜನಗರ ಶಾಪಗ್ರಸ್ಥ ನಗರ. ಮುಖ್ಯಮಂತ್ರಿಗಳಾಗಿ ನೀವು ಅಲ್ಲಿಗೆ ಹೋಗಬೇಡಿ.

ಶ್ರೀ ಸಿ.ಗುರುಸ್ವಾಮಿ : ಮಾನ್ಯ ದೇವೇಗೌಡರು ಚಾಮರಾಜನಗರಕ್ಕೆ ಭೇಟಿ ನೀಡಿದ ಮೇಲೆ ಮುಖ್ಯಮಂತ್ರಿಗಳಾಗಿ ನಂತರ ಪ್ರಧಾನಮಂತ್ರಿಗಳಾದರು ಸ್ವಾಮಿ.

ಶ್ರೀ ಕೆ.ಶ್ರೀನಿವಾಸಗೌಡ: ಇಪ್ಪತ್ತೊಂದನೆ ಶತಮಾನದಲ್ಲಿ ಇದೊಂದು ಹೆಗ್ಗಳಿಕೆ ಎಂದರೆ ಅಸಹ್ಯವಾಗುತ್ತದೆ, ಒಂದು ಹಳ್ಳಿಗೆ ಹೋದರೆ ಅಧಿಕಾರ ಹೋಗುತ್ತದೆನ್ನುವುದಾದರೆ ಆ ಹಳ್ಳಿಯ ಜನರು ಊಟವನ್ನೇ ಮಾಡುವುದಿಲ್ಲ, ಹಾಗೇ ಉಪವಾಸವೇ ಇರುತ್ತಾರೆಯೇ? ದಯವಿಟ್ಟು ನಿಮ್ಮಂಥವರು ವಿದೇಶಗಳಲ್ಲಿ ಓದಿರುವವರು, ಆ ಹಿನ್ನೆಲೆ ಇರುವವರು ತಾವು ದಯವಿಟ್ಟು ಆ ಪಟ್ಟಣಕ್ಕೆ ಹೋಗಿ ಶಾಪವಿಮೋಚನೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಸಭಾಧ್ಯಕ್ಷರು: ಹೋಗಿದ್ದರಲ್ಲಾ.

ಶ್ರೀ ಎಸ್.ಎಂ.ಕೃಷ್ಣ: ನನ್ನಮಟ್ಟಿಗೆ ನಾನು ಮಾಡಿದ್ದೇನೆ, ಉಳಿದದ್ದನ್ನು ಶ್ರೀನಿವಾಸಗೌಡರು ಮುಗಿಸಬಹುದು.

ಶ್ರೀ ಸಿ.ಗುರುಸ್ವಾಮಿ: ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಚಾಮರಾಜನಗರಕ್ಕೆ ಭೇಟಿ ನೀಡಿದ ಮೇಲೆ ಪ್ರಧಾನಮಂತ್ರಿಗಳಾದರು.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಚಾಮರಾಜನಗರಕ್ಕೆ ಕುಡಿಯುವ ನೀರು ಯೋಜನೆ ಬಹಳ ಹಳೆಯದು, ಸುಮಾರು ಹತ್ತು ಹನ್ನೆರಡು ವರ್ಷಗಳ ಹಿಂದೆ ಪ್ರಾರಂಭವಾಗಿರುವ ಯೋಜನೆ. ಆಗ ಯೋಜನೆ ಪ್ರಾರಂಭವಾದಾಗ ಟೌನ್ ಒಳಗಡೆ ಪೈಪ್‌ಲೈನ್ ಅನ್ನು ಅಳವಡಿಸಿದ್ದರು, ಯೋಜನೆ ಪೂರ್ಣಗೊಳಿಸಲು ಹತ್ತು ಹನ್ನೆರಡು ವರ್ಷಗಳನ್ನು ತೆಗೆದುಕೊಂಡಿದ್ದರಿಂದ, ಆಗೇನು ಪೈಪ್‌ಗಳನ್ನು ಹಾಕಿದ್ದರು ಅವು ನೀರಿನ ಪ್ರೆಷರ್ ತಡೆಯಲಾರದೆ ಓಪನ್ ಆಗುವುದು ಬರ್ಸ್ಟ್ ಆಗುವುದೆಲ್ಲಾ ಆಗುತ್ತಿದೆ. ನಿನ್ನೆಯೂ ಕೂಡ ಈ ಕಲುಷಿತ ನೀರನ್ನು ಕುಡಿದ ಒಬ್ಬ ವ್ಯಕ್ತಿ ಚಾಮರಾಜನಗರದಲ್ಲಿ ಸತ್ತಿದ್ದಾನೆ, ಮತ್ತೆ ಇಪ್ಪತ್ತು ಜನರು ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಚಾಮರಾಜನಗರದಲ್ಲಿ ನೀರಿನ ವಿಚಾರವೂ ಕೂಡ ಒಂದು ರಾಜಕೀಯ ವಿಚಾರವಾಗಿ ಜನರು ಪರಿತಪಿಸುವಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಮುಖ್ಯಮಂತ್ರಿಗಳು ಹಿಂದೆ ಹಳ್ಳಿಯ ಜನರು ಬರೀ ಪೈಪ್ ಅನ್ನು ಮಾತ್ರ ನೋಡುತ್ತಿದ್ದರು, ಈಗ ಹಳ್ಳಿಗಳಿಗೂ ನಾವು ನೀರನ್ನು ಕೊಡುತ್ತೇವೆಂದು ಹೇಳಿದ್ದಾರೆ, ಅವರಿಗೆ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಎಲ್ಲಾ ಹಳ್ಳಿಗಳಲ್ಲಿಯು ಶುದ್ಧೀಕರಿಸಿದ ನೀರನ್ನು ಏನು ಸರಬರಾಜು ಮಾಡುತ್ತೀರೋ ಅದು ಲಭ್ಯವಾಗುವಂತಾಗಬೇಕು. ಮತ್ತೆ ಕೆಯುಎಸ್‌ಡಬ್ಲ್ಯೂಸ್ಕೀಂನಿಂದ ಈ ಹಳ್ಳಿಗಳಿಗೆ ಏನು ನೀರು ಕೊಡುವ ವ್ಯವಸ್ಥೆ ಇದೆ, ಅವರು ಮೇಯ್ನ್ ಲೈನ್‌ನಲ್ಲಿ ಒಂದು ಓಪನ್ ಮಾತ್ರ ಇಟ್ಟಿರುತ್ತಾರೆ, ಆರ್‌ಡಿಪಿಆರ್ ಇಲಾಖೆಯಿಂದ ಅದಕ್ಕೆ ಹಣ ತುಂಬಿಸಿದಾಗ ಮಾತ್ರ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ದಯಮಾಡಿ ಈ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಎಲ್ಲೆಲ್ಲಿ ಈ ಯೋಜನೆ ಇದೆ, ಅದರಲ್ಲಿ ನಮ್ಮ ಗುಂಡ್ಲುಪೇಟೆ ಕೂಡ ಸೇರಿದೆ, ಜೊತೆಯಲ್ಲಿಯೇ ಆ ಹಳ್ಳಿಗಳಿಗೆ ಈ ಪೈಪ್‌ಲೈನ್ ಅನ್ನು ಅಳವಡಿಸುವಂಥ ವ್ಯವಸ್ಥೆಯಾಗಬೇಕು. ಮತ್ತೆ ಈ ಚಾಮರಾಜನಗರದ ಈ ಇಪ್ಪತ್ತು ಹಳ್ಳಿಗಳು ಏನು ಹಿಂದೆ ಸೇರಿರುತ್ತವೆ, ಅಲ್ಲಿಗೂ ಕೂಡ ಶುದ್ಧೀಕರಿಸಿದ ನೀರನ್ನು ತಲುಪಿಸುವಂಥ ವ್ಯವಸ್ಥೆಯಾಗಬೇಕು.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಸದಸ್ಯರು ಹೇಳಿದ ವಿಚಾರಕ್ಕೆ ಸಂಬಂಧಿಸಿದಂತೆ, ಆರ್‌ಡಿಪಿಆರ್ ಮಿನಿಸ್ಟ್ರಿ ಹಾಗೂ ಈ ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್ ಇವೆರಡರ

ಮಧ್ಯೆ ಸಾಕಷ್ಟು ಕೋ ಆರ್ಡಿನೇಷನ್ ಬೇಕಾಗುತ್ತದೆ, ಆ ಕೋಆರ್ಡಿನೇಷನ್ ಅಭಾವವನ್ನು ಈಗ ನಾನು ನೋಡುತ್ತಿದ್ದೇನೆ. ಆದುದರಿಂದ ಹೆಚ್ಚಿನ ಕೋಆರ್ಡಿನೇಷನ್ ತರುವುದಕ್ಕೆ ನಾನು ಡೆವಲಪ್‌ಮೆಂಟ್ ಕಮಿಷನರ್‌ರವರಿಗೆ ಆದೇಶವನ್ನು ಕೊಟ್ಟು, ಇಂತಹ ನೀರಿನ ಸರಬರಾಜು ಯೋಜನೆಗಳೇನಿವೆ, ಅವುಗಳಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ಸಕ್ರಿಯವಾಗಿ ಪಾತ್ರವಹಿಸುವುದಕ್ಕೆ ಮತ್ತೆ ಅವರಿಬ್ಬರಲ್ಲಿ ಹೆಚ್ಚು ಸಮನ್ವಯ ಸಾಧಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಮೈಸೂರು ನಗರದಲ್ಲಿ ಎ.ಡಿ.ಬಿ. ನೆರವಿನಿಂದ ರಸ್ತೆಗಳ ಡಾಂಬರೀಕರಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3(337)

ಪ್ರಶ್ನಿಸಿದವರು: ಶ್ರೀ ಶಂಕರಲಿಂಗೇಗೌಡ ಕೆಚ್.ಎಸ್.(ಚಾಮರಾಜ)

ಉತ್ತರಿಸಬೇಕಾದವರು: ಡಿ.ಬಿ.ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರ ಮತ್ತು ಕೆ.ಯು.ಐ.ಡಿ.ಎಫ್.ಸಿ.ಸಚಿವರು)

ಪ್ರಶ್ನೆ

1) ಮೈಸೂರು ನಗರದಲ್ಲಿ ಎ.ಡಿ.ಬಿ. ನೆರವಿನಿಂದ ಡಾಂಬರೀಕರಣ ಪೂರ್ಣಗೊಳಿಸಿರುವ ರಸ್ತೆಗಳು ಯಾವುವು: ಡಾಂಬರೀಕರಣ ಪೂರ್ಣಗೊಳಿಸಬೇಕಾದ ರಸ್ತೆಗಳು ಯಾವುವು?

2) ಯಾವಾಗ ಡಾಂಬರೀಕರಣ ಕಾರ್ಯ ಪೂರ್ಣಗೊಳಿಸಲಾಗುವುದು?

3) ಡಾಂಬರೀಕರಣದ ಗುಣಮಟ್ಟ ಉತ್ತಮವಾಗಿದೆಯೇ?

ಉತ್ತರ

1. ಮೈಸೂರು ನಗರದ ಅನೇಕ ರಸ್ತೆಗಳ ಡಾಂಬರೀಕರಣ ಕಾರ್ಯ ಎ.ಡಿ.ಬಿ. ನೆರವಿನಿಂದ ಎರಡು ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಈ ಕೆಳಕಂಡ ರಸ್ತೆಗಳ ಡಾಂಬರೀಕರಣ ಪೂರ್ಣಗೊಂಡಿದೆ.